# ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

---

## ಮಾನವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮೌಲ್ಯಗಳ ಪಾತ್ರ ಮಹತ್ವದ್ದು

* *

ಮಾನವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮೌಲ್ಯಗಳ ಪಾತ್ರ ಮಹತ್ವದ್ದು ಎಂದು ನಿವೃತ್ತ ಪ್ರಾಂಶುಪಾಲರಾದ ಡಾ. ಸಿ. ಶಿವಕುಮಾರಸ್ವಾಮಿಯವರು ಹೇಳಿದರು.

ಅಕ್ಟೋಬರ್ 30ರಂದು ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 282ನೆಯ 'ಶಿವಾನುಭವ ದಾಸೋಹ' ಡಿಜಿಟಲ್ ಕಾರ್ಯಕ್ರಮದಲ್ಲಿ 'ವಚನಗಳಲ್ಲಿ ಮೌಲ್ಯ' ಕುರಿತು ಉಪನ್ಯಾಸ ನೀಡುತ್ತಾ, ವಚನ ಎಂದರೆ ವಾಗ್ದಾನ, ನುಡಿದಂತೆ ನಡೆಯುವುದು ಎಂದರ್ಥ. ಜೀವನದ ವಿಕಾಸದಲ್ಲಿ ಮೌಲ್ಯಗಳ ಪಾತ್ರ ಪ್ರಮುಖವಾದುದು. ಮೌಲ್ಯ ಎಂದರೆ ಸಂಸ್ಕೃತಿ ಸಂಪ್ರದಾಯ ಪದ್ಧತಿಗಳನ್ನು ಪಾಲಿಸುವುದು. ಇವು ಭಿನ್ನವಾಗಿದ್ದರೂ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುತ್ತವೆ. ಸತ್ಯ ಶುದ್ಧ ಕಾಯಕವನ್ನು ಮಾಡಬೇಕು. ವ್ಯಷ್ಟಿ-ಸಮಷ್ಟಿಗಳ ಹಿತ ಅಡಗಿರುವುದು ಅಹಂಕಾರದ ತ್ಯಾಗದಲ್ಲಿ. ನಾನೆಂಬ ಅಹಂಕಾರವನ್ನು ತೊರೆಯಬೇಕು, ಅಹಂಕಾರ-ಮಮಕಾರಗಳು ವ್ಯಕ್ತಿಯ ಅಜ್ಞಾನಕ್ಕೆ ಕಾರಣವಾಗುತ್ತವೆ. ಎಲ್ಲರನ್ನೂ ಗೌರವದಿಂದ ಕಾಣಬೇಕು. ಧನ ಸಂಗ್ರಹದ ಮೋಹವನ್ನು ಕೈಬಿಡಬೇಕು. ಅಧರ್ಮ ಸಂಪಾದನೆಯಲ್ಲಿ ಮನುಷ್ಯ ಇಂದು ವ್ಯಾಪಕವಾಗಿ ತೊಡಗಿಸಿಕೊಂಡಿದ್ದಾನೆ. ಪರರ ದ್ರವ್ಯಗಳ ಬಗ್ಗೆ ಎಂದೂ ಆಸೆ ಪಡಬಾರದು. ತಾಮಸಗುಣದಿಂದ ವ್ಯಕ್ತಿಯ ಅಧಃಪತನವಾಗುತ್ತದೆ. ಸದಾಚಾರಿಗಳ ಸಂಘವನ್ನು ಮಾಡಬೇಕು. ಅನ್ಯರ ಹಂಗಿನಲ್ಲಿರಬಾರದು, ಅಸತ್ಯವನ್ನು ನುಡಿಯಬಾರದು, ಮಾತುಕೊಟ್ಟು ತಪ್ಪಬಾರದು, ವಿಶ್ವಾಸಘಾತುಕವನ್ನು ಮಾಡಬಾರದು. ಅನ್ಯರನ್ನು ದೂಷಿಸಬಾರದು. ಇವೆಲ್ಲವೂ ಸಾರ್ವಕಾಲಿಕ ಮೌಲ್ಯಗಳು. ಮಾನವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮೌಲ್ಯಗಳು ಬಹಳ ಮಹತ್ತರ ಪಾತ್ರವನ್ನು ವಹಿಸುತ್ತವೆ. ಅವು ವಚನಗಳಲ್ಲಿ ಅಡಕವಾಗಿವೆ. ಅವುಗಳನ್ನು ಜೀವನದಲ್ಲಿ ಪರಿಪಾಲನೆ ಮಾಡಿದರೆ ಉತ್ತಮವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಶರಣರು ತಿಳಿಸಿದ್ದಾರೆ ಎಂದರು.

ನಿರ್ದೇಶಕರು

ಪ್ರಕಟಣ ವಿಭಾಗ